


# ಚಿನ್ನಕ್ಕೆ ಬಂತು ಚಿನ್ನದಂಥ ಕಾಲ!

**ಮಹಿಳೆಯರ ಮೆಚ್ಚಿನ ಹಳದಿ ಲೋಹದ ಬೆಲೆ ಗಗನಮುಖಿಯಾಗಿದೆ. 10 ಗ್ರಾಂ ಒಡವೆ ಚಿನ್ನದ ಬೆಲೆ ಒಂದು ಲಕ್ಷ ರೂಪಾಯಿಯನ್ನು ದಾಟಿದೆ. ಬಂಗಾರದ ಒಡವೆ ಧರಿಸಬೇಕು ಎಂಬ ಮಧ್ಯಮವರ್ಗದ ಮಹಿಳೆಯರ ಕನಸು ಇನ್ನು ಗಗನಕುಸುಮವೇ ಸರಿ. ಚಿನ್ನದ ಬೆಲೆ ಈ ಪರಿ ಏರಲು ಕಾರಣವೇನು? ಮಾರುಕಟ್ಟೆ ತಜ್ಞರ ಅಭಿಪ್ರಾಯವೇನು? ಇಲ್ಲಿದೆ ಸಂಕ್ಷಿಪ್ತ ವಿಶ್ಲೇಷಣೆ.**



■ ಉಮಾ ಅನಂತ್

ಫಳಫಳ ಹೊಳೆಯುವ ಹಳದಿ ಲೋಹ ಎಂದರೆ ಯಾರಿಗೆ ತಾನೆ ಇಷ್ಟವಿಲ್ಲ? ಚಿನ್ನದೊಡವೆ 'ಎವರ್‌ಗ್ರೀನ್ ಹೀರೊ' ಆಗಿ ರಾಜ್ಯಭಾರ ನಡೆಸಲು ಅದಕ್ಕಿರುವ 'ಚುಂಬಕ ಶಕ್ತಿ'ಯೇ ಪ್ರಮುಖ ಕಾರಣ. ಸಿರಿವಂತರ ಗತ್ತು ಪ್ರದರ್ಶನಗೊಳ್ಳುವುದು ಚಿನ್ನಾಭರಣದಿಂದಲೇ. ಧನಿಕರ ತಿಜೋರಿಯಲ್ಲಿ ರಾರಾಜಿಸುವ ಹೊನ್ನಿನ ಕರಾಮತ್ತಿಗೆ ಮತ್ತೊಂದು ಕಾರಣ, ಇದು 'ಆಪದ್ಧನ' ಎಂಬ ಅಗ್ಗಳಿಕೆಯನ್ನು ಹೊಂದಿರುವುದು.

## ಐದು ವರ್ಷಗಳ ಚಿನ್ನದ ಬೆಲೆ

ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆ ದಿನೇದಿನೇ ಏರಿಕೆ, ಇಳಿಕೆ ಕಂಡುಬರುವುದರಿಂದ ಕಳೆದ ಐದು ವರ್ಷಗಳ ಚಿನ್ನದ ಬೆಲೆಯ ಅಂದಾಜು ಮೊತ್ತವನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯವಾಗಿ ಒಡವೆ ಚಿನ್ನವನ್ನೇ ಎಲ್ಲರೂ ಚಿನ್ನದ ರೇಟ್ ಎಂದು ಭಾವಿಸುವುದರಿಂದ ಹಾಗೂ 24 ಕ್ಯಾರಟ್‌ನ ಅಪರಂಜಿ ಚಿನ್ನದ ಬೆಲೆಯನ್ನು ಪರಿಗಣಿಸುವುದು ಕಡಿಮೆ ಆಗಿರುವುದರಿಂದ 22 ಕ್ಯಾರಟ್ ಚಿನ್ನದ ಬೆಲೆಯ ಅಂದಾಜನ್ನು ಮಾತ್ರ ನೀಡಲಾಗಿದೆ.

| | |
|---|---|
| **10,200** ಸದ್ಯದ ಬೆಲೆ | **9,450** ಒಂದು ತಿಂಗಳ ಹಿಂದೆ |
| **9,000** 6 ತಿಂಗಳ ಹಿಂದೆ | **8,100** ಒಂದು ವರ್ಷ ಹಿಂದೆ |
| **7,150** 2 ವರ್ಷ ಹಿಂದೆ | **6,500** 3 ವರ್ಷ ಹಿಂದೆ |
| **6,000** 4 ವರ್ಷ ಹಿಂದೆ | **5,500** 5 ವರ್ಷ ಹಿಂದೆ |